ಸಿ.ಸಿ.618/2023 ಪಿಡಬ್ಲ್ಯೂ-1

ದಿನಾಂಕಃ 18.12.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ**

ಆರೋಪಿಯ ತಂದೆಯ ಹೆಸರು ನಾರಾಯಣಗೌಡ. ಆರೋಪಿಯು ಮೂಡಿಗೆರೆ ಬಿಳುಗುಳಾದ ಶಿವಾಜಿನಗರದಲ್ಲಿ ವಾಸವಿದ್ದಾರೆ. ಆರೋಪಿ ಟೈಲರಿಂಗ್ ಕೆಲಸ ಮತ್ತು ಅಡಿಕೆ ವ್ಯಾಪಾರ ಮಾಡುತ್ತಿದ್ದಾರೆ. ನಾನು ಖಾಸಗಿಯಾಗಿ ಸಿವಿಲ್ ಕಂಟ್ರಾಕ್ಟ್ ಕೆಲಸ ಮಾಡುತ್ತೇನೆ. ಈ ವಿಚಾರವನ್ನು ದೂರು ಮತ್ತು ನೋಟೀಸ್ ನಲ್ಲಿ ಹೇಳಿ ಬರೆಸಿದ್ದೇನೆ. ನಾನು ಕಳೆದ 12-13 ವರ್ಷಗಳಿಂದ ಸಿವಿಲ್ ಕಂಟ್ರಾಕ್ಟ್ ಕೆಲಸ ಮಾಡುತ್ತಿದ್ದೇನೆ. ನಾನು ಆದಾಯ ತೆರಿಗೆ ಪಾವತಿದಾರನಲ್ಲ. ನಾನು ಸಿವಿಲ್ ಕಂಟ್ರಾಕ್ಟ್ ಆಗಿ ಕೆಲಸ ಮಾಡುತ್ತಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ವಾರ್ಷಿಕವಾಗಿ ರೂ.5,00,000/- ರಿಂದ ರೂ.6,00,000/- ಆದಾಯ ಇದೆ. ನನ್ನ ಖರ್ಚನ್ನು ಕಳೆದು ಸುಮಾರು ರೂ.4,00,000/- ರಿಂದ ರೂ.5,00,000/- ಹಣ ಉಳಿಯುತ್ತದೆ. 2022 ನೇ ಸಾಲಿನಲ್ಲಿ ನಾನು ಸಕಲೇಶಪುರ ಬಾಳುಪೇಟೆಯಲ್ಲಿ ಜಿಜಿಎಂ ಗ್ರೂಪ್ಸ್‌ನ ರೆಸಾರ್ಟ್ ಕಟ್ಟಡ ಕೆಲಸ ಮಾಡುತ್ತಿದ್ದೆ. ಆ ಕೆಲಸದ ವಿಚಾರವಾಗಿ ಕರಾರು ಮಾಡಿಕೊಂಡಿಲ್ಲ. 2022 ರಲ್ಲಿ ನನ್ನ ಬಳಿ ರೂ.10,00,000/- ಹಣ ಉಳಿದಿತ್ತು. ಆ ಹಣವನ್ನು ಶ್ರೀನಿಧಿ ಎಸ್ಟೇಟ್ ರವರಿಂದ ಪಡೆದಿದ್ದೆ.

ನಾನು ಕಂಟ್ರಾಕ್ಟ್ ಕೆಲಸ ಮಾಡುವಾಗ ಮುಂಗಡವಾಗಿ ಹಣ ಪಡೆಯುತ್ತೇನೆ. ಶ್ರೀನಿಧಿ ಎಸ್ಟೇಟ್ ರವರಿಂದ 2022 ರ ನವೆಂಬರ್ ತಿಂಗಳಲ್ಲಿ ಮುಂಗಡ ಹಣ ಪಡೆದಿದ್ದೆ. ಆ ಹಣವನ್ನು ನಗದಾಗಿ ಪಡೆದಿದ್ದು ನನ್ನ ಬಳಿ ಯಾವುದೇ ದಾಖಲೆ ಇಲ್ಲ. ಶ್ರೀನಿಧಿ ಎಸ್ಟೇಟ್ ನವರು ನನಗೆ ಚೆಕ್ ನ್ನು ಕೊಟ್ಟಿರಲಿಲ್ಲ. ಮೇಲೆ ಹೇಳಿದಂತೆ ಶ್ರೀನಿಧಿ ಎಸ್ಟೇಟ್ ನವರಿಂದ ನಾನು ಹಣ ಪಡೆದಿದ್ದೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಜಿ.ಜಿ.ಮಂಜುನಾಥ್ ರವರೇ ಸದರಿ ಎಸ್ಟೇಟ್ ನ ಮಾಲೀಕರು. ಸದರಿರವರಿಂದ ಸಾಕ್ಷಿ ನುಡಿಸಲು ನನ್ನಿಂದ ಆಗುವುದಿಲ್ಲ. ನಾನು 2022 ರ ಡಿಸೆಂಬರ್ ತಿಂಗಳಲ್ಲಿ ಆರೋಪಿಗೆ ಹಣ ಕೊಟ್ಟಿದ್ದೇನೆ. ಸಂಜೆ ಹಣ ಕೊಡುವುದಾಗಿ ಆರೋಪಿ ನನ್ನಿಂದ ಹಣ ಪಡೆದಿದ್ದರು. ನಾನು ಆರೋಪಿಗೆ ಹಣ ಕೊಡುವಾಗ ಬೇರೆ ಯಾರು ಹಾಜರಿರಲಿಲ್ಲ. ಆರೋಪಿಗೆ ಮೂಡಿಗೆರೆ ಬಾಲಕೀಯರ ಹಾಸ್ಟೇಲ್ ಬಳಿ ಇರುವ ಕ್ಯಾಂಟೀನ್ ನಲ್ಲಿ ರೂ.2,00,000/- ಹಣ ಕೊಟ್ಟು ನಂತರ ಅವರ ಮನೆಯಲ್ಲಿ ರೂ.2,20,000/- ಹಣ ಕೊಟ್ಟಿದ್ದೇನೆ. ನನಗೆ ಮೂಡಿಗೆರೆಯ ಬಿಳುಗುಳ ಶಾಖೆಯ ಬ್ಯಾಂಕ್ ಆಫ್ ಬರೋಡ ಬ್ಯಾಂಕ್ ನಲ್ಲಿ ಖಾತೆ ಇದೆ. ಸದರಿ ಬ್ಯಾಂಕ್ ಖಾತೆಯ ಸಂ.83070100001204 ಆಗಿದೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.